ಬಾಗಿಲವರೆಗೂ ಬಂದಳು. ತಲೆಯಿಂದ ಕಾಲಿನವರೆಗೂ ಕಪ್ಪು ಬುರ್ಖಾದಲ್ಲಿ ಆವೃತ್ತವಾಗಿದ್ದಳು. ಮುಖ ನೋಡುವುದಿರಲಿ, ಅವಳ ಪಾದವನ್ನು ಕೂಡಾ ನೋಡಲು ಸಾಧ್ಯವಿರಲಿಲ್ಲ. ಎಡವಿ ಬೀಳದೆ ನಡೆಯಲು ಅವಳ ಎರಡು ಕಣ್ಣುಗಳಿಗೆ ಮಾತ್ರ ಅವಕಾಶವಿತ್ತು. ಖಲಂದರ್ ಸ್ವಲ್ಪ ಬದಿಗೆ ಸರಿದು ನಿಂತ. ಮದುಮಗಳ ಮುಖ ಕಾಣಲಿಲ್ಲ. ಬದಲಿಗೆ, ಮದುಮಗ ಕಾರಿನ ಹಿಂಬದಿಯ ಬಾಗಿಲು ಬಳಿ ಬಂದವನು ಖಲಂದರ್‌ನನ್ನು ಕಂಡು, 'ಅಸ್ಸಲಾಂ ಅಲೈಕುಂ ಅಂಕಲ್' ಎಂದು ನಮಸ್ಕರಿಸಿ ಕಾರಿನಲ್ಲಿ ಕುಳಿತ. ಹುಡುಗಿ ಮೈಯಲ್ಲಾ ಹಿಡಿಯಾಗಿ ಹಿಂದಿನ ಸೀಟಿನಲ್ಲಿ ತನ್ನ ಪತಿಯ ಪಕ್ಕ ಬಂದು ಕುಳಿತಳು. ಇನ್ನು ಅಲ್ಲಿ ಹೆಚ್ಚು ಹೊತ್ತು ನಿಲ್ಲುವುದು ಸಭ್ಯತೆಯ ಲಕ್ಷಣವಲ್ಲ ಎಂದು ಖಲಂದರ್ ತನ್ನ ಕೆಲಸದ ನಿಮಿತ್ತ ಮುಂದಡಿ ಇಟ್ಟ. ಆ ಹುಡುಗನ ಪೊಗರನ್ನು ಕಂಡು ಖಲಂದರ್‌ನ ಮನಸ್ಸು ಕಹಿಯಾಯಿತು.

ಆ ದಿನ ಅಳಿಯ ಮಗಳನ್ನು ಕರೆದುಕೊಂಡು ಕಾರಿನಲ್ಲಿ ಹೋದ ನಾಸೀರ್ ಮತ್ತು ಅವನ ಭೇಟಿ ಕೊನೆಯಾಗುವುದೆಂದು ಖಲಂದರ್ ಭಾವಿಸಿರಲಿಲ್ಲ. ಮದುವೆಯಾದ ಒಂದು ತಿಂಗಳಿಗೆ ಹಠಾತ್ ಸುದ್ದಿ ಬಂತು. ನಾಸಿರ್ ತೀರಿಹೋದ. ರಮ್ಜಾನ್ ತಿಂಗಳ ಸಾವು. ಆ ಸುದ್ದಿಯನ್ನು ಕೇಳಿದ ಕೂಡಲೇ ಸ್ವತಹ ಖಲಂದರ್‌ಗೆ ಎದೆನೋವು ಬಂದಂತೆ ಅನಿಸತೊಡಗಿತು. ಎಡ ರೆಟ್ಟೆ ವಿಪರೀತ ನೋಯತೊಡಗಿತು. ತನ್ನ ತಳ್ಳುಗಾಡಿಯ ಬಳಿ ತನಗೆ ನಿಲ್ಲಲು ಸಾಧ್ಯವಾಗುತ್ತಿಲ್ಲ ಎಂದೆನಿಸಿ ಅವನ ಎದೆ ಕಟ್ಟಿಕೊಂಡಂತೆ ಮತ್ತು ಉಸಿರಾಡಲು ಸಾಧ್ಯವಿಲ್ಲ ಎಂದು ಭಾಸವಾದಾಗ ಅವನು ಕೂಡಲೇ ತನ್ನ ಮಗ ಅಮ್ಜದ್‌ಗೆ ಫೋನ್ ಮಾಡಿದ. ಅವನನ್ನು ವ್ಯಾಪಾರಕ್ಕೆ ನಿಲ್ಲಿಸಿ ಆಟೊದಲ್ಲಿಯೇ ಮಸೀದಿಯ ಬಳಿ ಹೋದ. ಅವನ ಎಣಿಕೆ ಸರಿಯಾಗಿತ್ತು. ಮಸೀದಿಯ ಕೆಲ ಪ್ರಮುಖರು ನಾಸಿರ್‌ನ ಜನಾಜಗೆ ಹೋಗಲು ಸಿದ್ಧರಾಗುತ್ತಿದ್ದರು. ಅಂತಹ ಒಬ್ಬ ಮೋಟಾರ್ ಬೈಕ್ ಸವಾರನ ಹಿಂಬದಿ ಸವಾರನಾಗಿ ಖಲಂದರ್ ಆಸೀನನಾದ. ಅರ್ಧ ಗಂಟೆಯ ಪ್ರಯಾಣ. ನಾಸಿರ್‌ನ ಮನೆ ಮುಂಭಾಗದಲ್ಲಿ ಅವನು ತಲುಪಿದಾಗ ಆ ಮನೆಯನ್ನು ಕಂಡು ಖಲಂದರ್‌ಗೆ ಕಸಿವಿಸಿಯಾಗತೊಡಗಿತು. ಅಯ್ಯೋ, ನನ್ನ ಬಂಧು ಅಲ್ಲ ಬಳಗ ಅಲ್ಲ ನಾನ್ಯಾಕೆ ಅಲವತ್ತುಕೊಳ್ಳಬೇಕು ಎಂದು ಅವನು ಎಷ್ಟೇ ಸಮಾಧಾನ ಮಾಡಿಕೊಂಡರೂ ಆ ಮನೆಯ ಸ್ವರೂಪವೇ ದೈನ್ಯತೆಯಿಂದ ಕೂಡಿತ್ತು. ಯಜಮಾನನ ಆರ್ಥಿಕ ಸಾಮರ್ಥ್ಯವನ್ನು ತೆರೆದಿಡುತ್ತಿತ್ತು. ಎಷ್ಟೇ ತಡೆದುಕೊಂಡರೂ ಅವನ ಕಣ್ಣಾಲಿಗಳು ತುಂಬಿಬಂದವು.

ಅವನ ಶಂಕೆ ನಿಜವಾಗಿತ್ತು. ಶವಸಂಸ್ಕಾರಕ್ಕೆ ಅಪ್ಪನೇನೋ ಬಂದಿದ್ದ. ಆದರೆ, ಆ ಮನೆಯ ಅಳಿಯ ನಾಪತ್ತೆಯಾಗಿದ್ದ. ತನ್ನ ಮಗ ಕೆಲಸದ ನಿಮಿತ್ತ ದೆಹಲಿಗೆ ಹೋಗಿ ಎರಡು ದಿನಗಳಾಗಿವೆ. ಹೀಗಾಗಿ ಅವನು ಬರುವ ಸಾಧ್ಯತೆ ಇಲ್ಲ. ಮಾಡುವ ಕೆಲಸ ಮಾಡಿ ಪೂರೈಸಿ ಎಂದು ಘನಿ ಎಷ್ಟೇ ಸಮರ್ಥನೆ ಮಾಡಿಕೊಂಡರೂ ಜನರ ನಡುವೆ ಗುಸುಗುಸು ಹರಡಿತ್ತು. ಮುಂದಿನ ಕೆಲಸಕ್ಕೆ ಜನರು ಕೈ ಜೋಡಿಸಿದರು. ಸತ್ತವರು ಸತ್ತರು, ಆದರೆ ಬದುಕಿರುವವರ ಹೋರಾಟ ಮುಂದುವರೆಯಿತು. ತಿಂಗಳೊಪ್ಪತ್ತಿನಲ್ಲಿ ಮಸೀದಿಯ ಜಮಾತ್‌ಗೆ ಅರ್ಜಿ ಬಂದಿತ್ತು. ತನ್ನ ಪತಿ ತನ್ನ ತಂದೆಯ ಶವಸಂಸ್ಕಾರಕ್ಕೂ ಬರಲಿಲ್ಲ. ತದನಂತರ ಕೂಡ ತನ್ನನ್ನು ಬಂದು ನೋಡಲಿಲ್ಲ. ತನ್ನೊಡನೆ ಯಾವ ಸಂಪರ್ಕವನ್ನು ಕೂಡ ಹೊಂದಿಲ್ಲ. ತನ್ನ ಫೋನ್ ಕರೆಯನ್ನು ಸ್ವೀಕರಿಸುವುದಿಲ್ಲ. ತನ್ನ ತಂದೆ ಲಕ್ಷಾಂತರ ರೂಪಾಯಿಗಳ ವರದಕ್ಷಿಣೆ ಮತ್ತು ಮೋಟಾರ್ ಬೈಕ್ ಅನ್ನು ಕೊಟ್ಟು ಮದುವೆ ಮಾಡಿಕೊಟ್ಟರು. ಅವೆಲ್ಲವನ್ನೂ ತಾನೆ ಇಟ್ಟುಕೊಂಡು ಅನುಭವಿಸುತ್ತಿರುವ ಪತಿ ತನ್ನನ್ನು ಮಾತ್ರ ತೊರೆದಿದ್ದಾನೆ. ಮಾವನಾದ ಘನಿ ಕೂಡಾ ಎಲ್ಲಾ ಜವಾಬುದಾರಿಯನ್ನು ಮಗನ ಮೇಲೆ ಜಾರಿಸಿ ತನ್ನ ಹೊಣೆಗಾರಿಕೆಯನ್ನು ಕೊಡವಿಕೊಂಡಿದ್ದಾನೆ. ತನಗೆ ನ್ಯಾಯ ಕೊಡಿಸಿ. ಆತನಿಗೆ ಬುದ್ಧಿವಾದವನ್ನು ಹೇಳಿ ತನ್ನ ಸಂಸಾರವನ್ನು ಒಟ್ಟುಗೂಡಿಸಿ ಕೊಡಿ. ಮಸೀದಿಯ ಜಮಾತ್‌ನ ಅಧ್ಯಕ್ಷರು ಎಷ್ಟೇ ನೋಟಿಸುಗಳನ್ನು ಕೊಟ್ಟರೂ ಘನಿಯಾಗಲಿ ಮಗನಾಗಲೀ ಸ್ಪಂದಿಸಲಿಲ್ಲ.